## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 30-09-2022

### ಬಸವಕಲ್ಯಾಣ ಪೊಲಿಸ ಠಾಣೆ: ಅಪರಾಧ ಸಂಖ್ಯೆ: 118/2022: 379 ಐಪಿಸಿ:

ದಿನಾಂಕ 29/09/2022 ರಂದು 1830 ಗಂಟೆಗೆ ದೂರುದಾರ ವೆಂಕಟಸ್ವಾಮಿ ತಂದೆ ವೆಂಕಟಯ್ಯಾ ನಾಯ್ಡು ವಯ: 52 ವರ್ಷ ಜಾತಿ: ರಡ್ಡಿ ಉ: ಒಕ್ಕಲುತನ ಸಾ: ಹಣಮಂತವಾಡಿ ರವರು ಠಾಣೆಗೆ ಬಂದು ದೂರು ನೀಡಿದರ ಸಾರಾಂಶವನೆAದರೆ ಇವರ ಹತ್ತಿರ ಒಂದು ಲಾರಿ ನಂ ಕೆ.ಎ 39-5224 ನೆದ್ದು ಇರುತ್ತದೆ. ದಿನಾಂಕ 25/09/2022 ರಂದು ಮುಂಜಾನೆ ಲಾರಿ ಚಾಲಕ ಲಾರಿ ತೆಗೆದುಕೊಂಡು ಶಿವಾರದಲ್ಲಿ ಇರುವ ಜೈಭಾರತ ಖಾನಸಾರಿ ಫ್ಯಾಕ್ಟರಿ ಹತ್ತಿರ ನಿಲ್ಲಿಸಿ ದಿನಾಂಕ 26/09/2022 ರಂದು ಸಾಯಂಕಾಲ 4 ಗಂಟೆಗೆ ಜೈಭಾರತ ಖಾನಸಾರಿ ಫ್ಯಾಕ್ಟರಿ ಹತ್ತಿರ ನಿಲ್ಲಿಸಿರುತ್ತಾನೆ. ದಿನಾಂಕ 27/09/2022 ರಂದು ಬೆಳಿಗ್ಗೆ 5 ಗಂಟೆಗೆ ನೋಡಿದಾಗ ಲಾರಿ ನಿಲ್ಲಿಸಿದ ಸ್ಥಳದಲ್ಲಿ ಇರುವುದಿಲ್ಲ ಯಾರೋ ಅಪರಿಚಿತ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಭಾಲ್ಕಿ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 137/2022 ಕಲಂ 457, 380 ಐಪಿಸಿ ;-

ದಿನಾಂಕ;29/09/2022 ರಂದು 1100 ಗಂಟೆಗೆ ಫಿರ್ಯಾದಿ ಶ್ರೀ. ವಿಠಲರಾವ ತಂದೆ ಬಸಪ್ಪ ಭೂರೆ ವಯ:70 ವರ್ಷ ಜಾ:ಲಿಂಗಾಯತ ಉ:ನಿವೃತ್ತ ಪಿ.ಹೆಚ್.ಇ ಸಾ:ಆನಂದವಾಡಿ ಗ್ರಾಮ ರವರು ಠಾಣೆಗೆ ಹಾಜರಾಗಿ ಕನ್ನಡದಲ್ಲಿ ಲಿಖಿತ ದೂರು ನೀಡಿದರ ಸಾರಾಂಶವೇನೆಂದರೆ ಮನೆಯಲ್ಲಿ ಿವರು ಮತ್ತು ಇವರ ಪತ್ನಿ ಇರುತ್ತಾರೆ ಮತ್ತು ಮಕ್ಕಳು ಮೊಮ್ಮಕಳು ಬಸವ ಕಲ್ಯಾಣದಲ್ಲಿ ಇರುತ್ತಾರೆ. ಪಿಂಚಣಿ ಬರುವ ಹಣದಿಂದ ಉಪ-ಜೀವನ ನಡೆಯಿಸಿಕೊಂಡು ಇರುತ್ತಾರೆ. ಹೆಂಡತಿಯ ಚಿಕಿತ್ಸೆಗೆಂದು ಬ್ಯಾಂಕನಲ್ಲಿ ಖಾತೆಯಲ್ಲಿದ್ದ 1,00,000/- ರೂ ಹಣ ತಂದು 70,000/- ರೂ ಜೊತೆಯಲ್ಲಿ ತೆಗೆದುಕೊಂಡು ಹೋಗಿದ್ದು, ಉಳಿದ 30,000/- ಹಣ ಮನೆಯಲ್ಲಿ ಇಟ್ಟು, ಮನೆಗೆ ಕೀಲಿ ಹಾಕಿಕೊಂಡು ಕಲಬುರಗಿಗೆ ಹೋಗಿರುತ್ತಾರೆ. ದಿನಾಂಕ 29/09/2022 ರಂದು ಮನೆಯ ಮುಂದಿನ ಗೇಟ್ ಕೀಲಿ ಮುರಿದು ಬಿದ್ದಿರುತ್ತದೆ ಮುಖ್ಯ ದ್ವಾರ ಬಾಗಿಲು ತೆಗೆದಿದ್ದು, ಇರುತ್ತದೆ ಬಂದು ನೋಡಿ ಅಂತ ತಿಳಿಸಿದ್ದರಿಂದ ನಾನು ಮನೆಗೆ ಹೋಗಿ ನೋಡಲು ಅಲಮಾರಿನ ರೂಮಿನಲಿರುವ್ಲ ಬಟ್ಟೆಗಳು ಮತ್ತು ಪಾತ್ರೆಗಳು ಚೆಲ್ಲಾಪಲ್ಲಿಯಾಗಿ ಬಿದ್ದುದ್ದು ಇರುತ್ತದೆ. ಅಲಮಾರಿ ತೆಗೆದು ನೋಡಿದಾಗ ನನ್ನ ಹೆಂಡತಿಯ ಬಂಗಾರದ ಒಡವೆಗಳು ಎಲ್ಲವು ಇದ್ದವು. ಹೆಂಡತಿಗೆ ಚಿಕಿತ್ಸೆ ಕುರಿತು ತಂದಿಡಲಾಗಿದ್ದ ನಗದು ಹಣ 30,000/- ರೂ ಇರಲಿಲ್ಲ. ಇದನ್ನು ಯಾರೋ ಅಪರಿಚಿತರು ಕಳ್ಳರು ದಿನಾಂಕ 28/09/2022 ರಂದು ರಾತ್ರಿ 1000 ಗಂಟೆಯಿಂದ ದಿನಾಂಕ 29/09/2022 ರಂದು ಮುಂಜಾನೆ 06:00 ಗಂಟೆಯವರೆಗೆ ಮನೆಯ ಬಾಗಿಲದ ಕೀಲಿ ಮುರಿದು ಕಳವು ಮಾಡಿಕೊಂಡು ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.